we will take serious note of the suggestion made by the hon'ble Member and take action not only in respect of this particular unit, but also in respect of other units.

ಶ್ರೀ ಟಿ ಬಿ. ಜಯಚಂದ್ರ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ ಏತಕ್ಕೆಂದರೆ ಜವಾಬ್ದಾರಿ ಹೊತ್ತಿರತಕ್ಕಂಥ ಸರ್ಕಾರದವರು ಇದರ ಬಗ್ಗೆ ಸಿ. ಬಿ. ಐ. ತನಿಖೆ ನಡೆಸುವುದಕ್ಕಾಗುವುದಿಲ್ಲವೇ ನ್ಯಾಷನಲ್ ಸೆಕ್ಯೂರಿಟಿ ಆ್ಯಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ಆ ಕಾನೂನುಗಳೆಲ್ಲಾ ಏತಕ್ಕೆ ಇರಬೇಕು ? ಲೀಗಲ್ ಆಗಿ ತಾವು ವಿಚಾರಣೆ ಮಾಡಬೇಕು ? ನಿರ್ದಿಷ್ಟವಾದ ಆರೋಪದ ಪ್ರಕಾರ ಇರುವಾಗ ಏತಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬಾರದು ?

Sri Manik Rao Patil.—Sir, only with regard to the matter of taking action under the Essential Commodities Act I said that I will find out the legal position. But with regard to the information availabie with the District Officers and the matters which have been discussed under the Twenty Point programme I never said that the Government is examining the legal aspect of it. I will call for the report from the Deputy Commissioner in this regard and take action on receipt of his report.

ಶ್ರೀ ಎಮ್. ವೈ. ಪಾಟೀಲ್.—ಎರಡು ವರ್ಷಗಳ ಒಂದೆ ಕಪಿಯಾದ ಫ್ಯಾಕ್ಟರಿಯಲ್ಲಿ ಮೆಜರ್ ಮೆಂಟ್‌ನಲ್ಲಿ ಆಳತೆ ತೂಕದಲ್ಲಿ ಕಡಿಮೆ ಇದ್ದುದರಿಂದ ಎಸ್. ಪಿ. ಯವರು ಡಿ. ಸಿ. ಯವರೇ ಚೆಕ್ ಅಪ್ ಮಾಡಿ ಕೇಸ್ ಹಾಕಿದ್ದಾರೆ. ಕೇಸ್ ಹಾಕಿದ ಮೇಲೆ ಈಗ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

Sri Manik Rao Patil.—Sir, it is a separate question. I do not have ready information,

Question No. 611 (256)

Mr. Deputy Speaker.—The question is held over as per the request of the Minister.

Drinking Water Scheme in Afzalpur Taluk

273. Sri M. Y. Patil (Afzalpur) :—Will the Minister for Rural Development and Panchayatraj be pleased to state :

(a) the number of drinking water schemes sanctioned in Afzalpur taluk;

(b) out of them, the number of schemes implemented;

(c) whether the Government will complete the drinking Water Scheme for every Panchayat Centre in this year,

(d) whether Government will sanction drinking water scheme to bigger villages *viz.* Badabala, Kevora, Ankalga, Saganur, Mallabada, Matholli, Madura, Gudur, Bhoganalli, Aurad, Chinnamullala, Goura Thelloni, Arjanagi, Thanda of Afzalpur Taluk this year ?

SRI B. RAMAIAH —(Minister for Rural Development and Panchayat Raj).

(a) So far 29 N. R. W. S. Scheme were sanctioned in this taluk.

(b) 15 Schemes were completed. 12 Schemes are in various stages of progress. Estimate is being prepared in respect of the two remaining schemes.

(c) Out of the Schemes sanctioned by the District Development Board and by the Government, some of them would be completed according to the Budget.

(d) This question does not arise as the list of N. R. W. S. schemes for 1982-83 is not yet finalised.

ಶ್ರೀ ಎಂ. ವೈ. ಪಾಟೀಲ್.—ಆಫಜಲಪುರ ತಾಲ್ಲೂಕಿನಲ್ಲಿ ೨೯ ಯೋಜನೆಗಳು ಮಂಜೂರಾಗಿದ್ದು ಅದರಲ್ಲಿ ೧೫ ಮುಗಿದು ಹೋಗಿದೆಂದು ಹೇಳಿದ್ದೀರಿ. ಆದರೆ ನನಗೆ ತಿಳಿದ ಹಾಗೂ ಯಾವುದೂ ಪೂರ್ತಿಯಾಗಿಲ್ಲ. ಹಳ್ಳಿಗಳ ಓಣಗಳಲ್ಲಿ ಪೈಪ್‌ಗಳನ್ನು ಹಾಕಿ ಇದುವರೆಗೂ ನೀರನ್ನು ಕೊಡುತ್ತಿಲ್ಲ, ಆದುದರಿಂದ ಮಾನ್ಯ ಮಂತ್ರಿಗಳವರು ಪ್ರಶ್ನೆಯನ್ನು ಚೆನ್ನಾಗಿ ಆರಿತುಕೊಂಡು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ರಾಮಯ್ಯ.—ಸರಿಯಾಗಿ ಅರ್ಥ ಮಾಡಿಕೊಂಡು ಉತ್ತರಿಸಬೇಕು ಎಂದು ಹೇಳಿದರು ಅದು ಏನು ಎಂಬುದು ನನಗೆ ಅರ್ಥವಾಗಲಿಲ್ಲ. ಅವರು ಕೇಳಿದ ಪ್ರಶ್ನೆಗೆ ನಾನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡೇ ಉತ್ತರ ಕೊಟ್ಟಿದ್ದೇನೆ. ಅವರ ಕ್ಷೇತ್ರದಲ್ಲಿ ಎಷ್ಟು ಸ್ಕೀಂಗಳು ಮಂಜೂರು ಆಗಿತ್ತು ಎಷ್ಟು ಮುಗಿದಿದೆಂದು ಹೇಳಿದ್ದೇನೆ. ಪುನಃ ಹೊಸದಾಗಿ ಬೇಕಾದರೆ ಇತ್ತೀಚೆಗೆ ಮಂಜೂರು ಆಗಿರತಕ್ಕ ಯೋಜನೆಗಳು ಬೇಕಾದರೂ ಹೇಳುತ್ತೇನೆ· ೧೯೮೧-೮೨ರಲ್ಲಿ ೬ ಸ್ಕೀಂಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಸೆಂಟ್ರಲ್ ಎನ್.ಆರ್.ಡಬ್ಲ್ಯು.ಎಸ್.ನಲ್ಲಿ ೫ನ್ನು ಕೊಟ್ಟಿದ್ದೇವೆ ಮತ್ತೆ ಸ್ಟೇಟ್ ಸೆಕ್ಟಾರ್‌ನಿಂದ ೨ನ್ನು ಕೊಟ್ಟಿದ್ದೇವೆ. ಹಿಂದಿನ ಯೋಜನೆಗಳು ಆಗಿದೆಯೋ ಇಲ್ಲವೊ ಎನ್ನುವ ಬಗ್ಗೆ ಪರಿಶೀಲನೆ ತರಿಸಿಕೊಂಡೇ ಉತ್ತರ ಕೊಟ್ಟಿದ್ದೇನೆ ಇದರಲ್ಲಿ ಮಾನ್ಯ ಸದಸ್ಯರಿಗೆ ಅನುಮಾನವೇನೂ ಬೇಡ. ಅವರು ಇನ್ನೊಮ್ಮೆ ಸ್ಥಳಕ್ಕೆ ಹೋಗಿ ಸಮೀಕ್ಷೆ ನಡೆಸಿ ಯಾವುದಾದರೂ ಆಗಿಲ್ಲವೆಂದು ನಿರ್ದಿಷ್ಟವಾಗಿ ತಿಳಿಸಿದರೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೈ. ಪಾಟೀಲ್.—ಪೂರ್ತಿ ಆಗದೇ ೧೫ ಸ್ಕೀಂಗಳನ್ನು ಪಂಚಾಯಿತಿಯವರಿಗೆ ಬಲವಂತವಾಗಿ ವಹಿಸಿಕೊಟ್ಟಿದ್ದೀರಿ. ಒಂದು ವರ್ಷದಲ್ಲಿ ೩-೪ ಸ್ಕೀಂಗಳು ಮಾತ್ರ ನಡೆದಿದೆ ಬಾಕಿ ಯಾವ ಯೋಜನೆಗಳೂ ಪೂರ್ತಿಯಾಗಿಲ್ಲ. ಆದುರಿಂದ ಯಾರೂ ನೀರನ್ನು ಕುಡಿಯುತ್ತಿಲ್ಲ. ಇದನ್ನು ಮಾನ್ಯ ಮಂತ್ರಿಗಳವರು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದಾರೆಯೇ ?

ಶ್ರೀ ಬಿ. ರಾಮಯ್ಯ.—ಅಧ್ಯಕ್ಷರೇ ಬಲವಂತವಾಗಿ ಗ್ರಾಮ ಪಂಚಾಯಿತಿಯವ ಗೆ ವಹಿಸುವ ಪದ್ಧತಿ ಇಲ್ಲ. ತಪಾಗೆ ಹೇಳಬೇಕೆಂದರೆ ಬಹುಶ: ಇತ್ತೀಚೆಗೆ ನಮ್ಮ ಸರ್ಕಾರ ಬಂದ ಮೇಲೆ ೧೦ ಪರ್ಸೆಂಟ್ ಏನು ಪಂಚಾಯಿತಿಯವರು ಕಟ್ಟಬೇಕಾಗಿತ್ತು ಅದನ್ನು ತೆಗೆದು ಹಾಕಿರುವುದರಿಂದ ನಮ್ಮ ರಾಜ್ಯದಲ್ಲಿರ ತಕ್ಕ ಎಲ್ಲಾ ಗ್ರಾಮಪಂಚಾಯಿತಿಯವರು ಎಲ್ಲರು ಕೂಡ ನಮಗೆ ಕೊಡಿ, ನಮಗೆ ಕೊಡಿಯೆಂದು ಹೇಳ ತಕ್ಕ ಒತ್ತಡ ಜಾಸ್ತಿಯಾಗಿ ಬಿಟ್ಟಿದೆ. ಆದುದರಿಂದ ಮುಗಿದಿರತಕ್ಕಂಥ ಯೋಜನೆಯನ್ನು ಅವರಿಗೆ ವಹಿಸಿ ಕೊಡುತ್ತೇವೆ ಆದನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಅವರದಾಗಿರುತ್ತದೆ. ಇದರಲ್ಲಿ ಬಲತ್ಕಾರವಾಗಿ ವಹಿಸಿರತಕ್ಕದ್ದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಎರಡನೆಯದಾಗಿ ಅಪೂರ್ಣವಾಗಿರತಕ್ಕ ಯೋಜನೆಗಳನ್ನು ಪಂಚಾಯಿತಿಯವರಿಗೆ ವಹಿಸಿದ್ದಾರೆಂದು ಹೇಳಿದ್ದಾರೆ. ಆಲ್ಲಿ ಕೆಲವು ಸಂದರ್ಭದಲ್ಲಿ ಏನಾಗಿರುತ್ತದೆ ಎಂದರೆ ಟ್ಯಾಂಕ್ ಕಟ್ಟುವುದು ತಡವಾಗಿದ್ದರೆ ಡೈರೆಕ್ಟ್ ಆಗಿ ನಮಗೆ ನೀರನ್ನು ಒದಗಿಸಿ ಎಂದು ಕೆಲವು ಕಡೆಯಿಂದ ನಮಗೆ ಒತ್ತಾಯಗಳು ಬಂದುದರಿಂದ, ಅವರ ಒತ್ತಡಕ್ಕೆ ಮಣಿದು ಕೆಲವು ಕಡೆ ಅವರ

ವಶಕ್ಕೆ ವಹಿಸಿದ್ದೇವೆ. ಆದುದರಿಂದ ಮಾನ್ಯ ಸದಸ್ಯರಿಗೆ ಏನಾದರೂ ನಿರ್ದಿಷ್ಟವಾಗಿ ಎಲ್ಲಿಯಾದರೂ ಕೆಲಸವೇ ಆಗಿಲ್ಲವೆಂದು ತಿಳಿದಿದ್ದರೆ ಅದನ್ನು ಸರಿಪಡಿಸುವುದಾಗಿ ಭರವಸೆ ಕೊಡುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಓಣಿಗಳಲ್ಲಿ ಪೈಪ್‌ಲೈನ್ ಹಾಕಿಲ್ಲ, ನೀರನ್ನು ಕೊಡುತ್ತಿಲ್ಲ, ನೀರನ್ನು ಕೊಡದೇ ಅದು ಹೇಗೆ ನಿಮ್ಮ ಯೋಜನೆ ಕಂಪ್ಲೀಟ್ ಆಗುತ್ತದೆ ? ಹಣದ ಕೊರತೆಯಿಂದ ಏನಾದರೂ ಪೈಪ್‌ಲೈನ್ ಹಾಕುವುದು ನಿಂತು ಹೋಗಿದೆಯೆ ? ಅದಕ್ಕೆ ನಿಮ್ಮ ಹತ್ತಿರ ಏನು ಉತ್ತರವಿದೆ.

ಶ್ರೀ ಬಿ. ರಾಮಯ್ಯ.—ಒಂದು ಯೋಜನೆಗೆ ಅಂದಾಜನ್ನು ತಯಾರು ಮಾಡಿ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆಯೋ ಅಷ್ಟು ಹಣವನ್ನು ತೆಗೆದಿಟ್ಟಿರುತ್ತೇವೆ. ಹಣದ ಕೊರತೆ ಏನೂ ಇಲ್ಲ. ಜನಸಂಖ್ಯೆ ಬೆಳೆಯುತ್ತಿದೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಳಿವೆ ಲೈನ್ ಹಾಕುವುದು ಸ್ವಲ್ಪ ತಡವಾಗಿರಬಹುದು ಅದನ್ನು ಪೂರ್ತಿ ಮಾಡತಕ್ಕ ಜವಾಬ್ದಾರಿ ಸರ್ಕಾರದ್ದು ಇದೆ ಇಲ್ಲವೆಂದು ಅಲ್ಲ. ಡಿ.ಡಿ.ಸಿ. ಯಿಂದ ಏನು ರೆಕಮೆಂಡೇಷನ್ ಬಂದಿರುತ್ತದೆ ಆ ಪ್ರಕಾರವಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಮಾಡಿದ್ದೇವೆ. ಅಫಜಲ್‌ಪುರದಲ್ಲಿ ಆಗಿಲ್ಲವೆಂದು ತಾವು ಹೇಳುತ್ತಿದ್ದೀರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಶೀಲನೆ ಮಾಡಲು ಹೇಳುತ್ತೇನೆ.

ಶ್ರೀ ಎಂ. ವೈ. ಪಾಟೀಲ್.—ಇಷ್ಟತ್ತು ಎಸ್ಟಿಮೇಟ್ ಮಾಡಿ ೧೦ ವರ್ಷಗಳ ನಂತರ ಸ್ಕೀಂ ಕಂಪ್ಲೀಟ್ ಆದರೆ ಮೆಟೀರಿಯಲ್ಸ್ ಬೆಲೆ ಜಾಸ್ತಿಯಾಗುವುದಿಲ್ಲವೆ ? ಆದರಿಂದ ಹಣದ ಕೊರತೆಯಾಗುವುದಿಲ್ಲವೆ ? ಈಗ ಎಲ್ಲ ಓಣಿಗಳಿಗೆ ಪೈಪ್‌ಲೈನ್ ಕನೆಕ್ಷನ್ ಸಿಕ್ಕಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆ ಮಾಡಿ ಎಲ್ಲ ಓಣಿಗಳಿಗೆ ಪೈಪ್‌ಲೈನ್ ಕೊಡುತ್ತೀರಾ ?

ಶ್ರೀ ಬಿ. ರಾಮಯ್ಯ.—ಆ ತರಹ ಏನಾದರೂ ಇದ್ದರೆ ಪರಿಶೀಲನೆ ನಡೆಸುತ್ತೇವೆ. ಸರ್ಕಾರ ಯೋಜನೆಯನ್ನು ತೆಗೆದುಕೊಂಡ ಮೇಲೆ ಮುಗಿಸುವ ಜವಾಬ್ದಾರಿ ಅದಕ್ಕೆ ಸೇರಿದ್ದು. ಹೊಸದಾಗಿ ತೆಗೆದುಕೊಳ್ಳುವ ವಿಚಾರದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ತೆಗೆದುಕೊಂಡ ಮೇಲೆ ಪೂರ್ಣಗೊಳಿಸಬೇಕಾಗುತ್ತದೆ.

ಶ್ರೀ ಎಂ. ವೈ. ಪಾಟೀಲ್.—ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಯಂತೆ ಎಲ್ಲ ಹಳ್ಳಿಗಳಿಗೂ ಪೈಪ್ಡ್ ವಾಟರ್ ಸ್ಕೀಂ ಅನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ವರ್ಷ ಪಂಚಾಯಿತಿ ಕೇಂದ್ರದ ಮಟ್ಟಿಗಾದರೂ ಪೈಪ್ಡ್ ವಾಟರ್ ಸ್ಕೀಂ ಅನ್ನು ಈ ರಾಜ್ಯದಲ್ಲಿ ಕೊಡುತ್ತೀರಾ ?

ಉಪಾಧ್ಯಕ್ಷರು.—ಬಂದೇ ಸಾರಿ ಕೊಡುತ್ತೇವೆಂದು ಹೇಳಿಲ್ಲ.

ಶ್ರೀ ಬಿ. ರಾಮಯ್ಯ.—ಕುಡಿಯುವ ನೀರಿಗೆ ಈ ರಾಜ್ಯದಲ್ಲಿ ಹಿಂದೆ ಎಂದೂ ಇಲ್ಲದಷ್ಟು ಆದ್ಯತೆ ನೀಡಿ ಕಳೆದ ೮–೧೦ ವರ್ಷಗಳಿಂದ ಈ ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡುತ್ತಾ ಬಂದಿದ್ದೇವೆ ಒನೇ ಪಂಚವಾರ್ಷಿಕ ಯೋಜನೆಯಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಆಕ್ರಮಿಸುತ್ತಿದ್ದೇವೆ. ಎಲ್ಲ ಗ್ರಾಮ ಪಂಚಾಯಿತಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ ಎಂದು ಕೇಳಿದ್ದಾರೆ. ಈಗಾಗಲೇ ನಾವು ಆದಷ್ಟು ಮಾಡಿಕೊಟ್ಟಿದ್ದೇವೆ, ಇನ್ನೂ ಹೆಚ್ಚು ಮಾಡಿಕೊಡುತ್ತೇನೆ. ಈ ವರ್ಷ ಸಾವಿರ ಯೋಜನೆಗಳನ್ನು ಮಾಡಿಕೊಟ್ಟಿದ್ದೇವೆ. ಮುಂದೆ ಇನ್ನೂ ಹೆಚ್ಚು ತೀವ್ರಗತಿಯಿಂದ ಕಾರ್ಯಕ್ರಮ ಹಾಕಿಕೊಂಡು ಮಾಡಿಕೊಡುತ್ತೇವೆ.

ಶ್ರೀ ಜಿ ಬಸವಣ್ಣಪ್ಪ.—(ಸದಸ್ಯರು ಹಾಜರಿಲ್ಲ)

ಶ್ರೀ ಭೀಮಣ್ಣ ಖಂಡ್ರೆ.—ಅವರ ಪರವಾಗಿ ನಾನು ಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು.—ಆ ಬಗ್ಗೆ ನನಗೇನು ಪತ್ರ ಬಂದಿಲ್ಲ, ಆದ್ದರಿಂದ, ಆಮೇಲೆ ನೋಡೋಣ.